Regd No. M 1299 ॥ ಸತ್ಯಾನ್ನಾಸ್ತಿ ಪರೋ ಧರ್ಮಃ ॥ ಬಿಡಿ ಸಂಚಿಕೆ ೩ ಪೈ

ಸತ್ಯವಾದಿ

ವರ್ಷಕ್ಕೆ ರೂ. 1—0—0 (ಮೈಸೂರು ಅರಮನೆ ಸರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಪ್ರತಿಷ್ಠಿತವಾಗಿ ಪ್ರಕಟಿಸಲ್ಪಡುವದು) ವರ್ಷಕ್ಕೆ ರೂ. 1—10—0
ಸ್ಥಳಕ್ಕೆ ಪ್ರತಿ ಬುಧವಾರ ಪ್ರಕಟಿಸಲ್ಪಡುವದು ಪರಸ್ಥಳಕ್ಕೆ

ಸಂಪುಟ 19] ಮೈಸೂರು, ಬುಧವಾರ 6 ನೆ ಮೆ 1936 [ಸಂಚಿಕೆ 34

ಮೈಸೂರು ಎಸ್. ಎನ್. ಪಂಡಿತರ

ಬಿಳೀಹಲ್ಲುಪುಡಿ! ಕರೀಹಲ್ಲುಪುಡಿ! ಮೈಸೂರು ಟೂತ್‌ಪೇಸ್ಟ್!

ಬಿಳೀಹಲ್ಲುಪುಡಿ—ಇದರಲ್ಲಿ ಸಿಹಿ ಪುಡಿಯು ಸುವಾಸನೆ ಸುರುಚಿ ಇವುಗಳಿಂದ ಕೂಡಿ ಹಲ್ಲುಗಳನ್ನು ಶುಭ್ರವಾಗಿಡುತ್ತದೆ. ಉಪ್ಪಿನ ಪುಡಿಯು ರುಚಿಯಾಗಿಯೂ, ಆರೋಗ್ಯಕರವಾಗಿಯೂ ಇದೆ. ಪೊಟ್ಟಣ 1 ಕ್ಕೆ (ಸಿಹಿ, ಉಪ್ಪು) 9 ಸೈ ; ಡಬ್ಬಿ 1 ಕ್ಕೆ (ಸಿಹಿ ಮತ್ತು ಉಪ್ಪು) 1 ಆಣೆ.

ಕರೀಹಲ್ಲುಪುಡಿ—ಇದನ್ನು ನಿತ್ಯವೂ ಉಪಯೋಗಿಸುವದರಿಂದ, ಹಲ್ಲುಗಳ ಎಲ್ಲಾ ಕಾಯಿಲೆಗಳನ್ನೂ ಗುಣಪಡಿಸಿ ಪುನಃ ತೇಗಬಾರದಂತೆ ಅಡ್ಡಿಪಡಿಸುತ್ತದೆ. ಹಲ್ಲುಗಳ ಕೊಳೆಯನ್ನು ತೆಗೆದು ಬೆಳ್ಳಗೆ ಇಡುವುದರಲ್ಲಿ ಅದ್ವಿತೀಯವಾದ್ದು. ಟಿಕ್ 1 ಕ್ಕೆ 2 ಆಣೆ.

ಮೈಸೂರು ಟೂತ್‌ಪೇಸ್ಟ್—ಸೀಮೆಯಿಂದ ಬರುವ ಟೂತ್‌ಪೇಸ್ಟ್‌ಗಳಿಗಿಂತ ಗುಣ ಮುಂತಾದುವುಗಳಲ್ಲಿ ಕಡಮೆಯಾಗಿಲ್ಲ. ನಯ, ಹೊಳಪು, ಸುವಾಸನೆ, ರುಚಿ ಇವುಗಳಿಂದ ಕೂಡಿ ವಸಡುಗಳಿಗೆ ಬಲವನ್ನೂ, ಹಲ್ಲುಗಳಿಗೆ ಥಳಥಳ್ಳನವನ್ನೂ ಉಂಟುಮಾಡುತ್ತದೆ. ಇದರ ಉಪಯೋಗದಿಂದ ಹಲ್ಲುಗಳನ್ನು ಹಾಳುಮಾಡತಕ್ಕ ಟಾರ್-ಟರ್ (ದಂತ ತರ್ಕರ) ಅಂಟು, ಹುಳು, ಮುಂತಾದವುನಾಶವಾಗುತ್ತವೆ. ಇದರಲ್ಲಿ ಎಲ್ಲಾ ಶಾಸ್ತ್ರೀಯ ಪದಾರ್ಥಗಳೇ ಸೇರಿರುತ್ತದೆ. ಇದನ್ನು ಬ್ರಷ್ ಆಥವಾ ಬೆರಳಿನಿಂದ ಉಪಯೋಗಿಸಬಹುದು. ಬ್ರಂದಾವರ್ತಿಪರಿಕ್ಷಿಸಿ ನೋಡಬೇಕಾದ್ದು. ಟಿಕ್ 1 ಕ್ಕೆ 5 ಆಣೆ.

[ಸರಾ:—ಮೇಲಿನ ಪುಡಿಗಳಲ್ಲಿ ಬತ್ತದಹೊಟ್ಟಿನಬೂಗಿ, ಸೀಮೆಸುಣ್ಣ ಇವು ಸೇರಿಲ್ಲ. ನಕಲು ಮೂಲುಗಳಿಗೆ ಮೋಸಹೋಗಬೇಡಿ. ವ್ಯಾಪಾರಿಗಳಿಗೆ ಹೆಚ್ಚು ಕಮಿಷನ್ ಕೊಡಲ್ಪಡುವದು. ನಮ್ಮಲ್ಲಿ ಎಲ್ಲಾ ವಿಧವಾದ ಆಯುರ್ವೇದೀಯ ಮಹೌಷಧಗಳೂ ತಯಾರಾಗುತ್ತವೆ. ಕ್ಯಾಟಲಾಗಿಗೆ ಬರೆಯಿರಿ]

ಪ್ರೊಪ್ರೈಟರ್ಸ್ ಆಡ್ರೆಸ್
ಎಸ್. ಎನ್. ಪಂಡಿತ್ ಅಂಡ್ ಸನ್ಸ್ ಮಳವಳ್ಳಿ ಏಜೆಂಟರು : ದಿ ಮೈಸೂರು ಆಯುರ್ವೇದಿಕ್ ಫಾರ್ಮೆಸಿ
Manufg Chemists Druggists & Physician ಮಿ| ಜಿ. ಎಸ್. ವೆಂಕಟರಾವ್ ೧೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

Season Deposits

Not exceeding Rs. 25,000 and falling below Rs. 500 from any one individual are received at Head Office and Branches of the Quilon Bank, Limited, from 15 th March to 15 th May, 1936, maturing from June to August at 3½ per cent interest per Annum.

Remittances received at par at all Branches and Agencies.

The Quilon Bank

(Incorporated in Travancore, 1919)

Mysore Races & Sweep

— RACES —

30th May, 3rd, 6th, 9th, 11th & 13th June

Railway Specials run on all Race days between Bangalore and Mysore at special concession rates.

GOLD CUP SWEEP

(By permission of Government of Mysore)

TICKETS RS. 5 EACH

To close on Saturday 23 rd May 1936

Bonus given to sellers of winning Tickets.

Total Collection 1935—Rs. 19,970/-

For Prospectus and Particulars apply to

The Honorary Secretary
Race Course,
Mysore

ಚಂಡಾಲಿನಿ ಶಬರಿ

ದಂಡಕಾರಣ್ಯದ ಮಧ್ಯಪ್ರದೇಶ—ಚಂಡಾಲನ ವಂಶದಲ್ಲಿ ಜನಿಸಿದ ಶಬರಿಯ ನಿವಾಸಸ್ಥಾನ, ಮಾತಂಗ ಮಹಾಮುನಿಯ ಆಶ್ರಮದ ಸಮೀಪ ಪ್ರದೇಶ. ಶಬರಿಯು ಚಂಡಾಲಿನಿಯಾದರೂ ಅಕೆಯ ಆಹಾರವು ಕಂದಮೂಲಗಳು ಮಾತ್ರವಾಗಿದ್ದವು. ಒಂದು ದಿನ ಶ್ರೀ ಮಾತಂಗ ಮಹರ್ಷಿಗಳು ನದಿಯಲ್ಲಿ ಸ್ನಾನ ಮಾಡಿಕೊಂಡು ಆಶ್ರಮಕ್ಕೆ ಹಿಂತಿರುಗುತ್ತಿದ್ದಾರೆ. ದೂರದಿಂದ ಶಬರಿಯು ಅತನನ್ನು ಕಂಡಳು. ಕೂಡಲೆ ಅಲ್ಲಿಂದ ಓಡಿ ಹೋಗಿ ಅತನ ದೃಷ್ಟಿಗೆ ಬೀಳದಂತೆ ಪೊದೆಯಲ್ಲಿ ಬೌಂಕೊಂಡಳು.

ಮಹನೀಯರ ದರ್ಶನವು ಸಾಧಾರಣವಾದುದಲ್ಲ ಅದು ಅತಿ ಮಹತ್ವವುಳ್ಳದ್ದು. ಶಬರಿಗೆ ಋಷೀಶ್ವರನನ್ನು ಕಂಡಂದಿನಿಂದಲೂ ಯಾವಾಗ ಅತನನ್ನು ದರ್ಶಿಸುವ ಭಾಗ್ಯವು ಪ್ರಾಪ್ತವಾಗುತ್ತದೆಯೋ ಎಂಬ ಒಂದೇ ಯೋಚನೆಯುಳ್ಳವಳಾಗಿದ್ದಳು. ತಾನು ಚಂಡಾಲವಂಶದಲ್ಲಿ ಜನಿಸಿದುದರಿಂದಲೂ ಅತನನ್ನು ದರ್ಶಿಸುವ ಯೋಗ್ಯತೆಯೂ ತನಗಿಲ್ಲದಿರುವುದರಿಂದಲೂ, ಯಾವದೋ ಬಗೆಯಲ್ಲಿ ಅತನ ದೃಷ್ಟಿಗೆ ಬೀಳದೆಯೇ ಋಷೀಶ್ವರನ ಸೇವೆಯನ್ನು ಮಾಡಲು ನಿಶ್ಚಯಿಸಿದಳು. ದಿನಂಪ್ರತಿ ಆಶ್ರಮವಾಸಿಗಳೆಲ್ಲರೂ ಗಾಢನಿದ್ರೆಯಲ್ಲಿರುವಾಗ ನಿಶಿರಾತ್ರಿಯಲ್ಲಿ ಆಶ್ರಮವನ್ನು ಸಮೀಪಿಸಿ, ಋಷೀಶ್ವರರು ಹೋಗಿಬರುವ ದಾರಿಯನ್ನು ಗುಡಿಸಿ ಸಾರಿಸಿ ಅವರ ಅಗ್ನಿ ಹೋತ್ರ ಮೊದಲಾದವುಗಳಿಗಾಗಿ ಒಂದು ಹೊರೆ ಸಮಿಧಗಳನ್ನು ತಂದಿಟ್ಟು ಹೋಗುತ್ತಿದ್ದಳು ಹೀಗೆ ಮಾಡುವದರಿಂದ ಋಷೀಶ್ವರರ ಆಸ್ಪದವನ್ನು ಎಂದಾದರೂ ಒಂದು ದಿನ ಪಡೆಯಬಹುದೆಂದು ಅಕೆಯು ಭಾವಿಸಿದ್ದಳು.

ಹೀಗೆ ಹಲವು ಕಾಲವು ನಡೆಯಿತು ಅಕೆಯ ಮನೋರಥವೂ ಈಡೇರಿತು. ಯಾರಿಗೂ ಗೋಚರವಾಗದೆ ದಿನಂಪ್ರತಿ ಹೀಗೆ ಸೇವೆಮಾಡುತ್ತಿರುವವು ಯಾರೆಂದು ಋಷೀಶ್ವರನು ಒಂದು ದಿನ ತನ್ನ ಶಿಷ್ಯರನ್ನು ಪ್ರಶ್ನಿಸಿದನು. ಅವರಿಗೂ ಆ ವಿಷಯವು ತಿಳಿದಿರಲಿಲ್ಲ. ಆದುದರಿಂದ ಒಂದು ದಿನ ರಾತ್ರಿ ನಿದ್ರೆ ಮಾಡದೆ ಜಾಗರೂಕತೆಯಿಂದಿದ್ದರು. ಆಗ ಈ ಸೇವೆ ಮಾಡುತ್ತಿರುವರು ಯಾರೆಂದು ತಿಳಿಯಬಂದಿತು. ಅಕೆಯು ಮಾಮೂಲಿನಂತೆ ತನ್ನ ಕೆಲಸವನ್ನು ಮುಗಿಸಿಕೊಂಡು ಹೊರಟು ಹೋಗುತ್ತಿದ್ದ ಸಮಯದಲ್ಲಿ ಋಷೀಶ್ವರನ ಶಿಷ್ಯರಲ್ಲೊಬ್ಬರು ಒಂದು "ಸ್ತ್ರೀಯಾ ದಿನಂಪ್ರತಿ ಏಕ ಈ ಕೆಲಸವನ್ನು ಮಾಡುತ್ತಿರುವಿ" ಎಂದು ಕೇಳಿದರು ಅಕೆಯು ಭಯದಿಂದ ನಡುಗುತ್ತ ನಿಂತಿರಲು, ಏನೂ ಮಾಡಲಿಕ್ಕೆ ತೋಚದೆ ತಮ್ಮ ಗುರುಗಳಲ್ಲಿಗೆ ಕರೆದುಕೊಂಡು ಹೋದರು. ಆಗ ಅತನು "ತಾಯಿ! ನೀನು ಯಾರವ್ವಾ? ಏಕೆ ಯಾರಿಗೂ ತಿಳಿಯದಂತೆ ದಿನಂಪ್ರತಿ ಸೇವೆ ಮಾಡುತ್ತಿರುವಿ?" ಎಂದು ಕೇಳಲು, ಶಬರಿಯು ಅತಿ ಭಕ್ತಿಯಿಂದ ಋಷೀಶ್ವರರಿಗೆ ನಮಸ್ಕರಿಸಿ, ಕಣ್ಣುಗಳಲ್ಲಿ ನೀರು ಸುರಿಯುತ್ತಿರಲು "ಪೂಜ್ಯರೆ, ನಾನು ಶಬರಿ, ಚಂಡಾಲಿನಿ, ಈ ಅರಣ್ಯದಲ್ಲಿಯೇ ಇರುವಂಥವಳು. ಅಕಸ್ಮಾತ್ತಾಗಿ ಒಂದು ದಿನ ತಮ್ಮ ದರ್ಶನಭಾಗ್ಯವು ಲಭಿಸಿತು. ಅಂದಿನಿಂದ ತಮ್ಮ ಸೇವೆ ಮಾಡಬೇಕೆಂಬ ಅಭಿಲಾಷೆಯು ಉದಯಿಸಿರುತ್ತದೆ ನಿಮ್ಮ ಯಾವ ಬಗೆಯ ಸೇವೆಯೂ ತಮುಗೆ ಅಂಗೀಕೃತವಾಗದೆ ಇರಬಹುದಾದ ದರಿಂದ ಬಹಳ ಭಕ್ತಿ ಮತ್ತು ನಮ್ರಭಾವಗಳೊಡನೆ ಈ ಅಲ್ಪಸೇವೆಯನ್ನು ಮಾಡುತ್ತಿದ್ದೇನೆ. ಇದನ್ನು ಮಾಡಿರುವದು ಪಾಪವಾಗಿದ್ದಪಕ್ಷದಲ್ಲಿ ನನ್ನ ತಪ್ಪನ್ನು ಕ್ಷಮಿಸಬೇಕಾಗಿ ಪ್ರಾರ್ಥಿಸುತ್ತೇನೆ" ಎಂದಳು.

ಇಷ್ಟು ಕೇಳುವನೆಗೆ ಋಷೀಶ್ವರರ ಹೃದಯವು ಕರಗಿತು. ದಯಾಪೂರ್ಣವಾಯಿತು. ಕೂಡಲೆ ಶಿಷ್ಯರನ್ನು ಕರೆದು "ಈ ಹೆಣ್ಣುಮಗಳನ್ನು ಇನ್ನು ಕರೆದುಕೊಂಡು ಹೋಗಿ, ಅಕೆಯು ನಮ್ಮ ಆಶ್ರಮದ ಹೊಂಭಾಗದಲ್ಲಿ ವಾಸಮಾಡಿಕೊಂಡಿರಲಿ. ಅಕೆಗೆ ದಿನಂಪ್ರತಿ ಆಹಾರವನ್ನು ನೀವೇ ಕೊಡುತ್ತ ಬನ್ನಿ" ಎಂದು ಋಷೀಶ್ವರನು ಅಪ್ಪಣೆಯನ್ನು ಕೊಡಲು, ಇದನ್ನು ಕೇಳುತ್ತಿದ್ದ ಶಬರಿಯು ಪುನಃ ಋಷೀಶ್ವರರಿಗೆ ಸಾಷ್ಟಾಂಗದಂಡಪ್ರಣಾಮಗಳನ್ನು ಮಾಡಿ ಆನಂದದಿಂದ ಕಣ್ಣುಗಳಲ್ಲಿ ನೀರು ಸುರಿಯುತ್ತಿರಲು, ಗದ್ಗದಸ್ವರದೊಡನೆ "ಭಗವಾನ್! ತಮ್ಮ ಅನುಗ್ರಹವನ್ನು ಪಡೆಯುವ ಯೋಗ ಉಂಟಾಗಲು ದಯವಿಟ್ಟು, ತಮ್ಮ ಭುಕ್ತ ಶೇಷವನ್ನು ನನಗೆ ಕೊಡುವಂತೆ ಅನುಜ್ಞೆ ಮಾಡಬೇಕು. ಸುಖವನ್ನಾಗಲಿ, ಸಿರಿಯನ್ನಾಗಲಿ ನಾನು ಬಲ್ಲೆ. ಪ್ರಪಂಚದಲ್ಲಿ ಯಾವದೊಂದೂ ನನಗೆ ಬೇಕಾಗಿರೆವೆನಿಲ್ಲ, ಮುಂದಾದರೂ ಜನನ ಮರಣ ಪ್ರವಾಹದಿಂದ ತಪ್ಪಿಸಿಕೊಳ್ಳಲಿಕ್ಕಾಗಿ ತಮ್ಮ ಕೃಪೆಗೆ ಪಾತ್ರಳಾಗಬೇಕೆಂಬುದೇ ನನ್ನ ಕೋರಿಕೆ" ಎಂದು ವಿಜ್ಞಾಪಿಸಿಕೊಂಡಳು.

ಈ ಬೇಡಿಕೆಯು ಋಷೀಶ್ವರರ ಮನಸ್ಸನ್ನು ಪೂರ್ಣವಾಗಿ ಕರಗಿಸಿತು. ಕೂಡಲೆ ಸ್ವಲ್ಪ ಹೊತ್ತು ಧ್ಯಾನಾಸಕ್ತರಾಗಿದ್ದು ಅಕೆಯ ಯಾವತ್ತು ವಿಷಯವನ್ನು ಅರಿತವರಾಗಿ "ನೀನು ಇನ್ನು ಮುಂದೆ ಯಾವ ಭಯವೂ ಇಲ್ಲದೆ ಎಲ್ಲರೊಂದಿಗೆ ಆಶ್ರಮದಲ್ಲಿಯೇ ಇರಬಹುದು" ಎಂದು ಅನುಜ್ಞೆಯನ್ನಿತ್ತರು.

ಹೀಗೆ ಕೆಲವು ಕಾಲ ಕಳೆಯಿತು. ಆ ಸುತ್ತು ಮುತ್ತಲಿದ್ದ ಋಷೀಶ್ವರರಿಗೆ ಈ ವಿಷಯವು ತಿಳಿಯಿತು. ಮಾತಂಗ ಋಷಿಯೊಂದಿಗೆ ಅಕೆಯು ಚಂಡಾಲಿಯಾಗಿದ್ದುದರಿಂದ ಬಹಳ ದೂರ ಇರಲು ಅರ್ಹಳಲ್ಲವೆಂದು ತಿಳಿಸಿದರೂ ಅತನು ಅವರ ಮಾತಿಗೆ ಬೆಲೆಕೊಡದೆ ಸುಮ್ಮನಿದ್ದುದರಿಂದ ಅವರು ಈ ಆಶ್ರಮಕ್ಕೆ ಒರವದನ್ನೂ ಈತನೊಂದಿಗೆ ಎಲ್ಲಾ ಬಗೆಯ ವ್ಯವಹಾರವನ್ನೂ ಮಾಡುವದನ್ನು ನಿಶ್ಚಿಸಿದರು ಅನೇಕ ಕಾಲ ಹೀಗೆಯೇ ಕಳೆಯಿತು. ಒಂದು ದಿನ ಋಷೀಶ್ವರನು ತನ್ನ ಅವಸಾನ ಕಾಲವು ಸಮೀಪಿಸಿರುವದನ್ನು ಅರಿತು ಅದಕ್ಕೆ ಸನ್ನದ್ಧನಾಗಿ ಆಸನದಲ್ಲಿ ಕುಳಿತು ಈಶ್ವರ ಪ್ರಾರ್ಥನೆಯಲ್ಲಿ ಮಗ್ನನಾದನು. ಋಷೀಶ್ವರನ ಶಿಷ್ಯರು ಅತನ ಸುತ್ತಲೂ ಕುಳಿತು ವ್ಯಸನದಿಂದ ಕಣ್ಣೀರು ಬಿಡುತ್ತಿದ್ದರು. ಶಬರಿಯು ಮುಂಕುಳಿತ ಹಸ್ತಳಾಗಿ, ಶೋಕದಿಂದ ಅಶ್ರುಗಳು ಧಾರೆಯಾಗಿ ಸುರಿಯುತ್ತಿರಲು, ಋಷೀಶ್ವರನನ್ನೇ ನೋಡುತ್ತಾ, ಸ್ವಲ್ಪ ದೂರದಲ್ಲಿ ನಿಂತಿದ್ದಳು.

[ಸಶೇಷ

ವರ್ತಮಾನಗಳು

ಮನುಷ್ಯನ ದೇಹದಲ್ಲಿ ಪ್ರಾಣವಾಯುವು ಶಕ್ತಿದಾಗ ಆಕಳಿಕೆಯು ಒರುವದೆಂದು ಶಾಸ್ತ್ರಜ್ಞರು ಕಂಡುಹಿಡಿದಿರುವರು.

ತೆನಾಲಿಗೆ ಆಂಧ್ರದೆ ಶದ ಪ್ಯಾರಿಸ್ಸು ಎಂದು ಹೆಸರಂತೆ. ಏಕೆಂದರೆ ಪ್ಯಾರಿಸ್‌ನಲ್ಲಿಯ ದುರಾಚಾರಗಳೆಲ್ಲವೂ ಅಲ್ಲಿರುವವಂತೆ.

ಕಳೆದ ವರ್ಷ ಇಂಗ್ಲೆಂಡಿನಲ್ಲಿ ೬೯೬೬೪ ಮದುವೆಗಳಾದವು. ೪೬೬,೩೬೧ ಮಂದಿ ಮರಣ ಹೊಂದಿದರು. ೫೯೧,೧೬೬ ಮಂದಿ ಹುಟ್ಟಿದರು.

ಇತರ ದೇಶೀಯರ ಹಡಗುಗಳನ್ನು ರಹಸ್ಯವಾಗಿ ಒಡೆದ ಹಾಕಲು ಇಟಲಿಯ ಹಡಗೊಂದು ವೆಡಿಟರೇನಿಯನ್ ಪ್ರಾಂತ್ಯದಲ್ಲಿ ರಾತ್ರಿಗಳಲ್ಲಿ ಸಂಚರಿಸುತ್ತಿರುವದೆಂದು ವರ್ತಮಾನ.

ಪೆಷಾವರ್ ಸಮೀಪದಲ್ಲಿ ಮಿನ್ನೂ ಎಂಬ ಗ್ರಾಮದಲ್ಲಿ ಕೆಲವರು ಮಹಮ್ಮದೀಯರ ಒಬ್ಬ ಯುವತಿಯನ್ನು ಎತ್ತಿಕೊಂಡು ಹೋಗಲು ಅವರ ಮೇಲೆ ಕೇಸು ಮಾಡಲ್ಪಟ್ಟಿತು. ಆ ಯುವತಿಯು ಮೈನರೆಂದು ಹಿಂದೂಗಳೂ, ಮೇಜರೆಂದೂ ಇಸ್ಲಾಂ ಮತವನ್ನು ಸ್ವೀಕರಿಸಿದಳೆಂದು ಮಹಮ್ಮದೀಯರೂ ಹೇಳುತ್ತಿರುವರು. ವಿಚಾರಣೆಗಾಗಿ ಕಳೆದ ೭ ನೇ ತಾರೀಖಿಗೆ ಮೇಜಿಸ್ಟ್ರೇಟರು ವಾಯಿದೆ ಕೊಟ್ಟಿದ್ದಾಗಿ ಹಿಂದೂ ಮಹಮ್ಮದೀಯರು ಮೇಜಿಸ್ಟ್ರೇಟರ ಮನೆಯ ತೋಟದೊಳಗೆ ಪ್ರವೇಶಿಸಿ ದೌರ್ಜನ್ಯವನ್ನು ಮಾಡುವದಾಗಿ ಹೆದರಿಸಿದರು. ವಿಚಾರಣೆಯು ನಡೆಯಲಿಲ್ಲವಾದ್ದರಿಂದ ೨ ಗುಂಪನ್ನು ಚದರಿಸಿದರು.

ಹಿಂದುಳಿದ ಜಾತಿಗಳವರು ಕ್ರೈಸ್ತಮತವನ್ನು ಅವಲಂಬಿಸಿದರೂ ಅವರ ಕಷ್ಟಗಳು ನಿವಾರಣೆಯಾಗುವದಿಲ್ಲವೆಂದು ಡಾ॥ ಅಂಬೇಡ್ಕರರು ರೋವಿನಲ್ಲಿಯ ಕ್ರೈಸ್ತಮತದ ಗುರುಗಳಾದ ಪೋಪರಲ್ಲಿ ಮೊರೆಯಿಡಲಾಗಿ ಕೆಲವು ಶತಮಾನಗಳು ಕಳೆದಲ್ಲದೆ ಬಡವರ ಯಾತನೆಯು ಆಗಲಾರದೆಂದು ಅವರು ತಿಳಿಸಿದ್ದರಿಂದ ಅಸಂತೃಪ್ತಿಯಿಂದ ವಾಪಸ್ಸು ಹೊರಟುಬಂತೆ. ಪ್ರತಿಯೊಬ್ಬನಿಗೂ ಅವನು ಇರುವ ಸ್ಥಳವೇ ಉತ್ತಮ ಹೆಂಬದನ್ನು ಮರೆಯಕೂಡದೆಂದು ನಾವು ಭಾವಿಸುತ್ತೇವೆ.

ಇಂಗ್ಲೆಂಡಿನ ವಿದೇಶಾಂಗ ಮಂತ್ರಿಗಳಾದ ಈಡರ್‌ರವರು ನಾನಾ ಜಾತಿಯ ಸಮಿತಿಯಲ್ಲಿ ಉಪನ್ಯಾಸ ಮಾಡುತ್ತ, ಅಬಿಸೀನಿಯಾ ಯುದ್ಧದಲ್ಲಿ ಯಾರೂ ವಿಷವಾಯುವನ್ನು ಪ್ರಯೋಗಮಾಡಕೂಡದೆಂದು ತಿಳಿಸಿದರು. ಇಟಲಿಯಿಂದ ೩೦೦ ಟನ್ನುಗಳ ವಿಷವಾಯುವು ಸೊಯಜ್ ಬಂದರಿನಲ್ಲಿ ಇಳಿಯಿತಾದುದರಿಂದ ಇಟಲಿಯ ವರ್ತನೆಯು ಸರಿಯಾದುದಲ್ಲವೆಂದು ಎಲ್ಲರೂ ಹೇಳುತ್ತಿರುವರು.

ದಂಪತಿ ಸಂವಾದ

ಹೆಂಡತಿ—ಗ ಡಾಗಬೇಕಾಗಿತ್ತು ಹೆಣ್ಣಾದೆ ನಾನು
ಹಿಂದಿನಾ ಜನುಮಾದಾ ಪಾಪವಮ್ಮಾ !
ಗಂಡ—ಹೆಣ್ಣಾಗಬೇಕಿತ್ತು ಗಂಡಾದೆ ನಾನು
ಹಿಂದಿನಾ ಜನ ಮದಾ ಕರ್ಮವಮ್ಮಾ !
ಹೆಂಡತಿ—ಅಡುಗೆ ಮಾಡಲು ಬೇಕು
ಮ ಸುರಿ ಬಳಿಯಲುಬೇಕು
ಬಿಸಿನೀರ ಕಾಸಿ ಹದಗೊಳಿಸಬೇಕು.
ಗಂಡ—ಅಡುವುದಕೆ ತರಬೇಕು ಉಡುವುದಕೆ ತೆಂಬೇಕು
ಬಿಸಿಲು ಬೇಗೆಯಲಿ ತೊಳಲಾಡಬೇಕ .
ಹೆಂಡತಿ—ಹಿತ್ತಲದ ಗಿಡಗಳಿಗೆ
ನೀರು ಹನಿಸಲುಬೇಕು
ಕತ್ತಲಿರವಾಗ ನಾನೇಳಬೇಕು.
ಗಂಡ—ಎತ್ತು ಕತ್ತೆಗಳನ್ನು
ನಾನೆ ಕಟ್ಟಲುಬೇಕು
ಮುತ್ತಿನೋಲೆಯನು ತಂದಿಕ್ಕಬೇಕು
ಹೆಂಡತಿ—ಮಕ್ಕಳಾ ಬಟ್ಟೆಒರೆ ಜೊಕ್ಕವಾಗಿಡಬೇಕು
ಮೆದುವೆ ಹಾಡನು ನಾನೆ ಹಾಡಬೇಕು.
ಗಂಡ—ಮಕ್ಕಳಾ ಶಿಕ್ಷಣಕೆ ಮದ ಮೈಮುಂಜಿಗೆ ನಾನೆ
ರೊಕ್ಕವನು ಬೇಕಷ್ಟ ಜೆಲ್ಲಬೇಕು.
ಹೆಂಡತಿ—ಆ ಕೆಲಸ ಈ ಕೆಲಸ
ಅರಚನವು ಬಿಡ ವಿಲ್ಲ
ದುಡಿದುಡಿದು ಹೆಣ್ಣಾಗಿ ಸಣ್ಣಾದೆನು.
ಗಂಡ—ಕನಸಿನಲಿ ಮನಸಿನಲಿ
ಸುತಿಸುತರು ಸುಖವಿಲ್ಲ
ದುಡಿದುಡಿದು ಗಂಡಾಗಿ ಮಣ್ಣಾದೆನು
ಹೆಂಡತಿ-ತರುವುದೊಂದೇ ಕೆಲಸ ಗಂಡುಸಿಗ ಮತ್ತೇನು
ಪರಿಪರಿಯ ಕರೆಕರೆಯ ಹೆಂಗುಸರಿಗೆ
ಗಂಡ—ತಿಂಬುಂಬ ಹಂಬಲವೆ ಹೆಂಗುಸಿಗೆ ಮತ್ತೇನು
ಪರಿಪರಿಯ ಗೋಳಾಟ ಂ ಎಸರಿಗೆ
ಇಬ್ಬರೂ ಕೂಡಿ—ಸಂಸಾರ ರಥ ಚರಿಸೆ ಸ್ತ್ರೀಪುರುಷ
ಚಕ್ರಗಳು
ಸರಿಯಾಗಿ ತಿರುಗಬೇಕು.
ಒಗ್ಗಾಲಿಂ ರಥವು ಮುಗ್ಗರಿಸಿ ಬೀಳುವುದು
ಗಂಡ-ಸೇಂ ? ಹೆಂಗ ಸೇನ. ?

[ಬಾಲಚಂದ್ರ.

ಲಾರ್ಡ್ ಕರ್ಜನ್‌ರಂಥವರೂ ರಾಜ ಪ್ರತಿನಿಧಿಗಳಾಗಿದ್ದಾಗ ಅವರಿಷ್ಟಾನ ಸಾರವಾಗಿ ಇಂಡಿಯಾ ಸರ್ಕಾರದ ಅಡಳಿತವನ್ನು ನಡಿಸಿದರಾಗಲಿ ಸೂತನ ರಾಜ ಪ್ರತಿನಿಧಿಗಳಾದ ಲಾರ್ಡ್ ಲಿನ್‌ಲಿತ್‌ಗೋ ರವರು ಇನ್ನೂ ಮುಂದೆ ಸ್ವೇಚ್ಛೆಯಾಗಿ ಅಧಿಕಾರವನ್ನು ಸಾಗಿಸಲು ಆಗುವದಿಲ್ಲವೆಂದು ಲುಡನ್ನು ಪತ್ರಿಕೆಗಳು ಬರೆಯುತ್ತಲಿವೆ.

೧೫ ದಿನಗಳ ಹಿಂದೆ ವೇಟಪಾಳ್ಯದ ಲೊಕಲ್ ಬೋರ್ಡು ಆಸ್ಪತ್ರೆಯಲ್ಲಿ ಒಬ್ಬ ಗರ್ಭಿಣಿಯು ಎರಡು ತಲೆಗಳ ಶಿಶುವನ್ನು ಹೆತ್ತಳು, ಅದು ಕೂಡಲೆ ಮೃತವಾಯಿತು. ಇದು ಒಂದು ಸೃಷ್ಟಿ ವೈಚಿತ್ರ. ಹೀಗಾಗಲು ಕಾರಣವೇನೆಂಬುದನ್ನು ಸರಿಯಾಗಿ ಹೇಳುವಂತೆ ಕಾಣಬರುವದಿಲ್ಲ.

ಬಿಡುನುಡಿಗಳು

ವೋಲೊಡಿನ ೬ ಯೂನಿವರ್ಸಿಟಿಗಳಲ್ಲಿ ಸಂಸ್ಕೃತ ಪದವನ್ನು ಕಲಿಸುತ್ತಿರುವರು.

ದೇಹೋಪವಾಸವು ಮೋಕ್ಷ ಸಾಲದು. ಮನಸ್ಸಿಗೂ ಉಪವಾಸವು ಅವಶ್ಯಕವು. ಮನಸ್ಸಿನ ಉಪವಾಸವೆಂದರೆ ದುಷ್ಟ ಸಂಕಲ್ಪಗಳಿಂದ ಮನಸ್ಸನ್ನು ದೂರೀಕರಿಸುವದು.

ಪಾಪವೆಂಬುದೊಂದು ವ್ಯಾಧಿಯು. ಪಶ್ಚಾತ್ತಾಪವೇ ಇದಕ್ಕೆ ಮದ್ದು. ಪಾಪಕಾರ್ಯವನ್ನು ಮಾಡಿದರುವಿಕೆಯೇ ರೋಗವು ಹರವಾದದಕ್ಕೆ ಕಾರುಹು.

ನಿನಗೆ ತಿಳಿದಿರುವ ಸದ್ವಿಚಾರಗಳನ್ನು ಇತರರಿಗೆ ತಿಳಿಸು.

ಅತ್ಯಾಶೆಯನ್ನು ವರ್ಜಿಸು

ಕೂಡಿಡುವದು ದೇವರಿಗೆ ದ್ರೋಹವಾಡಿದಂತೆ ಎಂದು ಅರಿ.

ಹಿರಿಯರೊಂದಿಗೆ ಕಾದಾಡದಿರು

ದಯಾಪೂರ್ಣನಾಗಿರು.

ನಿನ್ನ ಮತದಲ್ಲಿ ಸಂಪೂರ್ಣ ನಂಬಿಕೆಯನ್ನಿಟ್ಟು ಆ ಮತದ ನಿಯಮಗಳನ್ನನುಸರಿಸಿ ಆಚರಿಸು.

ಧರ್ಮದಲ್ಲಯೇ ಜರಿಸು.

ಪಾತ್ರರಾದವರಿಗೆ ದಾನಮಾಡು.

ದೀನರಲ್ಲಿ ದಯಾಭಾವವನ್ನು ವಹಿಸು.

ಮೂಕಪ್ರಾಣಿಗಳಲ್ಲಿ ದಯೆಯನ್ನು ವಹಿಸು.

ದೇವರ ಧ್ಯಾನದಲ್ಲಿ ಸೋಮಾರಿತನವನ್ನು ಬಿಟ್ಟು ಬಿಡು. ಸಂಪೂರ್ಣಭಾವದೊಂದಿಗೆ ಪ್ರಪಂಚ ವ್ಯವಹಾರಗಳನ್ನು ಮಾಡುತ್ತಿರು.

ಜರ್ಮನಿ ದೇಶದ ಒಂದು ಭಾರೀ ವಿಮಾನವು ೧೭ ಗಂಟೆಗಳಲ್ಲಿ ದಕ್ಷಿಣ ಅಮೇರಿಕದಿಂದ ಜರ್ಮನಿಗೆ ಒಂದು ತಲಪಿಸು ಯಾವ ವಿಮಾನವಾಗಲಿ ಇದುವರೆಗೂ ಇಷ್ಟು ವೇಗದಲ್ಲಿ ಬರಲಿಲ್ಲವೆಂದು ತಿಳಿಯಬಂದಿದೆ.

ಆಕಾಶದಲ್ಲಿಯ ವೇಘಗಳೆಲ್ಲವನ್ನೂ ತೂಕ ಮಾಡಿದಲ್ಲಿ ೬೧೫,೯೦೦,೦೦೦ ಪೌಂಡುಗಳು ಆಗುವದಾಗಿ ಬವೇರಿಯದಲ್ಲಿ ದಿನಂಪ್ರತಿ ಸುರಿಯುವ ಮಳೆಯನ್ನು ಹಿಡಿದು ಒಬ್ಬ ಜರ್ಮನಿ ಶಾಸ್ತ್ರಜ್ಞನು ಲೆಕ್ಕ ಹಾಕಿರುವನು.

ಇತಿಯೋಪಿಯಾ ಯುದ್ಧಕ್ಕಾಗಿ ಇಟಲಿಗೆ ತಿಂಗಳಿಗೆ ಸರಾಸರಿ ೧೫ ಕೋಟಿ ರೂಪಾಯಿಗಳು ವ್ಯಯವಾಗುತ್ತಿರುವದು

ವಾದಂಸವನ್ನು ಹವೆಯ ರೂಪವಾಗಿ ಮಾಡಿ ಅದರ ಮೂಲಕ ಎಲೆಕ್ಟ್ರಿಕ್ ದೀಪಗಳನ್ನು ಇನ್ನು ಮುಂದೆ ಬೆಳಗಿಸುವರೆಂದೂ, ಈ ದೀಪಗಳು ಹೆಚ್ಚು ಕಾಂತಿಯನ್ನು ಕೂಡುವವೆಂದು ತಿಳಿಯಬಂದಿದೆ.

ಗಯಾ ಸಮೀಪದಲ್ಲಿ ೯೦ ವರ್ಷದ ಮುದುಕ ನೊಬ್ಬನು ಕಣ್ಣುಗಳ ಕಾಣಿಸದಿದ್ದರೂ ಕುದುರೆಯ ಮೇಲೆ ಕುಳಿತು ಬೇಕಾದಕಡೆ ಹೋಗುತ್ತಿರುವದು, ಎಲ್ಲರಿಗೂ, ಆಶ್ಚರ್ಯವನ್ನುಂಟುಮಾಡಿದೆ.

ಮೃತಹುಡುಗಿಯೊಬ್ಬಳು ಜೀವಕ್ಕೆ ಬಂದಳು

ಇಂಗ್ಲೆಂಡಿನ ಓಕ್ಸ್‌ಫೋರ್ಡ್ ಎಂಬಲ್ಲಿ ಓರ್ವ ಹುಡುಗಿಯು ವ್ಯಕಳಾದ ೧೫ ನಿಮಿಷಗಳ ಅನಂತರ ಡಾಕ್ಟರರು ಅವಳನ್ನು ಜೀವಕ್ಕೆ ತಂದಿರುವರು. ಹುಡುಗಿಯು ಹೃದಯರೋಗ ಪೀಡಿತಳಾಗಿದ್ದಳು. ಅಕಸ್ಮಾತ್ತಾಗಿ ಇವಳ ಪ್ರಾಣವು ಹೋಯಿತು. ಡಾಕ್ಟರರು ತನ್ನಲ್ಲಿದ್ದ ಒಂದು ಔಷಧಿಯನ್ನು ಇಂಜಕ್ಷನ್ ಮೂಲಕ ಇವಳ ದೇಹದೊಳಗೆ ಸೇರಿಸಿದರು. ಹುಡುಗಿಯ ಹೃದಯವು ಮತ್ತೆ ಚಲಿಸಲಾರಂಭಿಸಿತು. ಹುಡುಗಿಯು ಈಗ ಗುಣಹೊಂದುತ್ತಿದ್ದಾಳೆ.

ಸಂತಾನ ನಿರೋಧ

ಮಿತವಾದ ದಾಂಪತ್ಯಭೋಗದಿಂದ ಜನಾಂಗಕ್ಕೆ ಅಪಾಯವಿಲ್ಲ. ಆದರೆ, ಯಾವಾಗ, ಗರ್ಭಕ್ಕೆ ಬಂದ ಸಂತಾನದ ಆರೈಕೆಗಾಗಿ ತಕ್ಕ ದೇಹಶಕ್ತಿ ಧನ ಶಕ್ತಿಯು ಇಲ್ಲದೆ ಹೋಗುತ್ತದೋ ಆವಾಗ ತಾಯಿಗೆ ಮಾತ್ರವೇ ಅಲ್ಲ, ಆ ಕುಟುಂಬಕ್ಕೂ ಜನಾಂಗಕ್ಕೂ ಬರಬರುತ್ತ ಸರ್ವಾಂಗ ದಾರಿದ್ರ್ಯವು ಬರುತ್ತದೆ. ದುಷ್ಪತಿಗಳಿಬ್ಬರ ಸಮ್ಮತಿಯಿಂದಲೂ ಇಂದ್ರಿಯನಿರೋಧವನ್ನಿಟ್ಟುಕೊಂಡು ತಮ್ಮ ಸಂತಾನ ಪರಿಪೋಷಕ ಶಕ್ತಿಗನುಸಾರವಾಗಿ ಅದನ್ನು ಸಡಲಿಸುವುದುತ್ತಮವೇ. ಆದರೆ ಬಾಯಿ ಮಾತಿನಿಂದ ಮಾತ್ರವೇ ಇಂದ್ರಿಯ ನಿರೋಧವಾಗುವದಿಲ್ಲ. ಇದಕ್ಕೆ ಇತಿಹಾಸವೇ ಸಾಕ್ಷಿ. ಜನಸಾಮಾನ್ಯದ ಕೆಟ್ಟ ಸ್ಥಿತಿಯೂ ನಮ್ಮ ದೇಶದಲ್ಲಿ ಪ್ರತಿವರ್ಷ ಹುಟ್ಟುವ ಸಂಖ್ಯೆಯೂ ಸಾಕ್ಷಿ. ತನಗೆ ಸಾಕಲಿಕ್ಕೆ ಬಾರದ ಸಂತಾನವನ್ನು ಹುಟ್ಟಿಸುವದೂ ಒಂದು ದೊಡ್ಡ ಪಾಪವೇ. ಹುಟ್ಟಿದ ಮಕ್ಕಳಿಗೆ ತಕ್ಕ ಅನ್ನ ಒಟ್ಟಿ ವಿದ್ಯೆಯನ್ನೆ ಕೊಟ್ಟು ಜೀವನ ಸಂಗ್ರಾಮದ ರಂಗದಲ್ಲಿ ಅವರನ್ನು ನಿಲ್ಲಿಸುವದು ತಾಯಿತಂದೆಯರ ಮೊದಲನೆಯ ಧರ್ಮ. ಒಂದು ಕಡೆ ನಿರೋಧವಿಲ್ಲ. ಇನ್ನೊಂದು ಕಡೆ ಹುಟ್ಟಿದ ಮಕ್ಕಳನ್ನು ಯೋಗ್ಯರೀತಿಯಿಂದ ಬೆಳೆಸುವ ಶಕ್ತಿಯಿಲ್ಲ. ಎಂದಮೇಲೇನು ಮಾಡಬೇಕು ? ನಿರೋಧವು ಸಾಧ್ಯವಲ್ಲದೇ ಹೋದಾಗ ಅಂತಹ ಸಾಕಲಾರದ ಸಂತಾನವಾದರೂ ಹುಟ್ಟದಂತೆ ಏನಾದರೂ ನಿರ್ಬಾಧಕವಾದ ಉಪಾಯವನ್ನು ಮಾಡಬೇಕೇ ? ಬೇಡವೋ ?

ಪಂಡಿತರಂ ತಾರಾನಾಥರ ಡೈರಿ.

ಸಹಾರಾ ಮರುಭೂಮಿಯು ೩೧೦೦ ಮೈಲಿ ಉದ್ದ ಮತ್ತು ೬೦೦ ಮೈಲಿ ಅಗಲ ಇದೆಯಂತೆ.

ದಕ್ಷಿಣ ಅಮೇರಿಕಾದ ಒಂದು ಕಾಡಿನಲ್ಲಿ ೬೦ ಅಡಿ ಎತ್ತರವಾಗಿ ಬೆಳೆದಿರುವ ಹೊಗೆ ಸೊಪ್ಪಿನ ಗಿಡವನ್ನು ಕಂಡು ಹಿಡಿದಿರುವರು.

ತಾರೀಖು ೧೧ ರಲ್ಲಿ ಅಬಿಸೀನಿಯಾ ಚಕ್ರವರ್ತಿಗಳು ರಾಜಧಾನಿಯಾದ ಅಡಿಸಬಬಾವಿಗೆ ಸುರಕ್ಷಿತವಾಗಿ ತಲಪಿರುವರು. ವಿಷವಾಯುವಿನಿಂದ ಸ್ವಲ್ಪ ಕೈಸುಟ್ಟುಹೋಗಿದೆ. ಧೈರ್ಯವಾಗಿರುವರು ಮತ್ತೆ ಇಟಲಿಯನ್ನು ಪುನಃ ಎದುರಿಸುವರು. ಹೀಗೆಂದು ತಿಳಿಯಬಂದಿದೆ ದಂಗೆಕೋರರ ಕೈಯಿಂದ ದೈವವಶಾತ್ ತಪ್ಪಿಸಿಕೊಂಡರು.

ಸೂಚನೆ

ಮುಂದಿನವಾರ ನನ್ನ ಪತ್ರಿಕೆಯು ಪ್ರಕಟವಾಗುವುದಿಲ್ಲ—ಸಂ.]

ಸತ್ಯವಾದಿ

ಅಬಿಸೀನಿಯಾ ಚಕ್ರವರ್ತಿಯವರು ರಾಜ್ಯವನ್ನು ಬಿಟ್ಟು ಪರಾರಿ ಹೊರಟರು.

ಈಚೆಗೆ ಬಂದಿರುವ ವರ್ತಮಾನದಂತೆ, ಅಬಿಸೀನಿಯಾ ಚಕ್ರವರ್ತಿಯವರು, ತಮ್ಮ ಪತ್ನೀಪುತ್ರರೂ ಪರಿವಾರವೂ ರಾಜಧಾನಿಯಾದ ಅಡಿಸಬಾಬಾವನ್ನು ಬಿಟ್ಟು ಜಿಬೂತಿಗೆ ಹೊರಟು ಹೋಗಿ ಅಲ್ಲಿ ಫ್ರೆಂಚರ ಆತಿಥ್ಯದಲ್ಲಿರುವರೆಂದು ತಿಳಿಯಬಂದಿದೆ. ಇವರು ತಮ್ಮ ರಾಜ್ಯದ ಅನುಕೂಲಕ್ಕೋಸ್ಕರವೇ ಬಟ್ಟರು. ರಾಜ್ಯಭಾರವಿಚಾರದಲ್ಲಿ ಅವರ ಶಕ್ತಿ, ಧೈರ್ಯ, ಸ್ಥೈರ್ಯಗಳಲ್ಲಿ ಅವರನ್ನು ಯಾರೂ ಅಳೆಗಳೆಯಲಾಗುವುದಿಲ್ಲ, ಭಾರಿ ಯುದ್ಧದ ಮಧ್ಯದಲ್ಲೇ ಇರುತ್ತಿದ್ದರು.

ಇವರನ್ನು ಹಿಡಿದು ಅಥವಾ ಕೊಲ್ಲಬೇಕೆಂಬುದೇ ಇಟಲಿಯವರ ಅಗಾಧ ಪ್ರಯತ್ನವಾಗಿರುತ್ತೆ. ಇವರು ಸಿಗಲಿಲ್ಲಾ; ಒಂದುವೇಳೆ ಇವರು ಸಿಕ್ಕಿಬಿಟ್ಟಿದ್ದಾದ್ದಾಗ್ಯೂ "ಲೀಗ್ ಆಫ್ ನೇಷನ್ಸ್" ಬಿಡಿಸುತ್ತಿದ್ದಿತ್ತೇ? ಎಂದಿಗೂ ಇಲ್ಲ. ಸ್ವತಂತ್ರದಿಂದ ನಡೆದ ಯುದ್ಧವನ್ನೇ ನಿಲ್ಲಿಸಲು ಪ್ರಯತ್ನಮಾಡದೆ ಇದ್ದವರು ಇವರನ್ನು ಅವರು ಸಂಕಿಸುತ್ತಿದ್ದರೇ? ಇಲ್ಲಾ.

ಮಿ|| ಅಂಥಾನಿ ಈಡನ್ ರವರ ಭಾಷಣದಿಂದ ಲೀಗ್ ಆಫ್ ನೇಷನ್ಸ್‌ನ ಅಭಿಪ್ರಾಯ ಕೊಂಚವೂ ಹೊರಬೀಳಲಿಲ್ಲ. ಆದರೆ ಬ್ರಿಟಿಷರ ಫಾರಿನ್ ಪಾಲಿಸಿಗಿದು ತಕ್ಕುದಾಗಿದೆ ಫ್ರೆಂಚರು ಇಟಲಿಯವರ ಮೇಲೆ ಕೈಮಾಡುವುದರಲ್ಲಿ ಸ್ವಲ್ಪವೂ ಭಾಗವಹಿಸುವುದಿಲ್ಲವೆಂದೂ ಈ ಚಕ್ರವರ್ತಿಯವರು ತಮ್ಮ ರಾಜಧಾನಿಯನ್ನು ಬಿಟ್ಟು ಓಡಿದ್ದು ಅವರಿಗೆ ಬಹಳ ಸಂತೋಷನೆಂದೂ ಗೊತ್ತಾಗುತ್ತೆ. ಅವರು ತಪ್ಪಿತವನ್ನು ಶಿಕ್ಷಿಸುವುದಕ್ಕೆ ಒದಲಾಗಿ ಅವರೇ ತಪ್ಪಿಸ್ಥರಾದರೂ ಆಗಬಹುದೆಂದು ಒಂದು ವರ್ತಮಾನ.

ವೃತ್ತಾಂತಗಳು.

ಕೆಲವು ವರ್ಷಗಳ ಹಿಂದೆ ಬದುಕಿದ್ದ ಪ್ಯಾರಿಸ್ ನಗರದ ಭಿಕ್ಷುಕಿಯೊಬ್ಬಳ ವೃತ್ತಾಂತವಿದು. ಆಗ ಆಕೆಗೆ ಪ್ರಾಯ ೭೫ ವರ್ಷ. ೪೦ ವರ್ಷಗಳಿಂದಲೂ ಪ್ಯಾರಿಸ್ ನಗರದ ಬೀದಿಯಲ್ಲಿ ಸರ್ವದಾ ಬೇಡಿ ತಿನ್ನುತ್ತಿದ್ದಳಂತೆ. ಕೊನೆಗೆ ಪರಿಶೋಧಿಸಿದಲ್ಲಿ ಈಕೆಯ ಸಂಪಾದನೆ—20 ಸಾವಿರ ಪೌನು, 30 ಮನೆಗಳು, ಮತ್ತು ಅನೇಕ ರೈಲ್ವೇ ಷೇರುಗಳು. ಇದ್ದವಂತೆ.

ಜರ್ಮನಿಯ ಸರ್ವಾಧಿಕಾರಿಯಾದ ಹರ್ ಹಿಟ್ಲರಿನ ವರ್ಷ ವರ್ಧಂತಿಯು ಕಳೆದ ತಾ || 20 ನೇ ಸೋಮವಾರ ಬರ್ಲಿನ್ ನಗರದಲ್ಲಿ ಅತಿ ಉತ್ಸಾಹದಿಂದ ಆಚರಿಸಲ್ಪಟ್ಟಿತು. 35 ಸಾವಿರ ಸೈನಿಕರು ಕವಾತು ಮಾಡಿದರು. ಅನೇಕ ಮಂದಿ ಅಧಿಕಾರಿಗಳಿಗೆ ಆ ಸಂದರ್ಭದಲ್ಲಿ ಬಹುಮಾನಗಳೂ ಬಿರುದುಗಳೂ ಕೊಡಲಾಯಿತು. ಹಿಟ್ಲರರು 1012 ~~ಕೊಟ್ಟಲಾಗಳನ್ನು ಬಾಸ~~ ಬಗ್ಗರಿಗೂ, 30 ಸಾವಿರ ಜೊತೆ ಕಾಲುಚೀಲಗಳನ್ನು ಸೀಪಾಯಿಗಳಿಗೂ ಬಹುಮಾನವಾಗಿ ಕೊಡಿಸಿದರೆಂದು ಪ್ರಕಟವಾಗಿದೆ.

ರುಮೇನಿಯಾ ದೇಶದಲ್ಲಿ ಯಾವ ವಿಧವಾದ ಭವಿಷ್ಯವನ್ನೂ ಹೇಳಕೂಡದೆಂದು ಕಾನೂನಾಗಿದೆ.

ಪಂಡಿತ ಜವಹರಿಲಾಲರ ಆತ್ಮ ಕಥೆಯೊಳಗೆ ಅನೇಕ ಮನೋರಂಜಕ ವಿಚಾರಗಳು ಇರುವುದೆಂದು ತಿಳಿಯಬಂದಿದೆ.

ಪಾಟಿಯಾಲಾ ಮಹಾರಾಜರು ನರೇಂದ್ರಮಂಡಲಿಯ ಅಧ್ಯಕ್ಷಪದವಿಗೆ ರಾಜೀನಾಮೆ ಕೊಟ್ಟಿರುತಾರೆ.

ಜೀವಾವಧಿ ಜೈಲುವಾಸವನ್ನನುಭವಿಸುತ್ತಿರುವ ಮಿಸೋರಿಯ ಒಬ್ಬ ಹೆಂಗಸು ಜೈಲಿನಲ್ಲಿ ಒಂದು ಮಗುವನ್ನು ಹೆತ್ತಿರುವದು ಅಲ್ಲಿಯ ಜನರಲ್ಲಿ ಆಶ್ಚರ್ಯವನ್ನೂ ಅಸಹ್ಯವನ್ನೂ ಉಂಟುಮಾಡಿದೆ. ಇವಳ ಈ ನಡತೆಗೆ ಜೈಲು ಅಧಿಕಾರಿಗಳು ಜವಾಬ್ದಾರರೆನ್ನುತ್ತಾರೆ- ಈಕೆಯು ತಾನು ಹೆರುವ ಸಂದರ್ಭ ಒದಗಿದ್ದಕ್ಕೆ ಜೈಲುವಾರ್ಡರಿನ ಮೇಲೆ ತಪ್ಪು ಹೊರಿಸಿದ್ದಾಳೆ.

104 ವರ್ಷಗಳ ಹಿಂದೆ ಬ್ರಿಟನ್ನಿನಲ್ಲಿ ಒಬ್ಬನು ತನ್ನ ಹೆಂಡತಿಯನ್ನು ಮಾರ್ಕಟ್ಟಿನಲ್ಲಿ ಹರಾಜು ಹಾಕಿ 1 ಪೌಂಡ್ ಮತ್ತು ಒಂದು ನಾಯಿಗೆ ಬದಲಾಗಿ ಮಾರಿದನಂತೆ.

ಕಲ್ಕತ್ತಾದಲ್ಲಿ ಬಂಧಿಸಲ್ಪಟ್ಟಿದ್ದ ಸ್ತ್ರೀಯರು ಬಂಧನದಿಂದ ವಿಮೋಚನೆ ಹೊಂದಿರುವರು. ಇನ್ನು ಮೇಲೆ ಅವರು ತಮ್ಮ ಮನೆಗಳಲ್ಲಿಯೇ ಬಂದಿಗಳಾಗಿರಬೇಕು.

ಮೈಸೂರು ವಾರ್ತೆ

ಕಳೆದ ೨೯ ನೇ ತಾರೀಖಿನ ದಿವಸ ರಾಜಧಾನಿಯ ಟ್ರಸ್ಟ್ ಬೋರ್ಡಿನ ವಿಾಟಿಂಗು ನಡೆಯಿತೆಂದು ತಿಳಿಯಬಂದಿದೆ.

ಕಳೆದ ತಿಂಗಳು ತಾ|| ೩೦ ರಲ್ಲಿ ಶಿವಮೊಗ್ಗದಲ್ಲಿ ವಿಪರೀತ ಬಿರುಗಾಳಿಯೂ, ಭಾರಿ ಅನೆಕಲ್ಲು ಮಳೆಯೂ ಸುರಿಯಿತೆಂದು ತಿಳಿಯಬಂದಿದೆ.

ಮೈಸೂರು ಬ್ಯಾಂಕಿನ ರಾಜಧಾನಿಯ ಬ್ರಾಂಚಿನ ಮ್ಯಾನೇಜರ್ ಮ|| ಮಲ್ಲಪ್ಪನವರು ತಮ್ಮ ಪುತ್ರಿ ಸಾ || ಲಲಿತಮ್ಮನನ್ನು, ಬೆಂಗಳೂರು ಕಂಟ್ರಾಕ್ಟರ್ ಮ || ನಂಜುಂಡಪ್ಪನವರ ಪುತ್ರ ಚಿ || ಚೆನ್ನಬಸಪ್ಪನವರಿಗೆ ಕೊಟ್ಟು, ಮೈಸೂರಿನಲ್ಲಿ ೧೦ ತಾರೀಖಿನ ದಿವಸ ವಿವಾಹವನ್ನು ನೆರವೇರಿಸುವರಾಗಿರುತ್ತಾರೆ.

ಭವಿಷ್ಯತಿಯಲ್ಲಿ ಕಾಗದದ ಕಾರ್ಖಾನೆಸ್ಥಾಪಿಸಲು ಅದರ ಭಂಡವಾಳವನ್ನು ಜಾಯಿಂಟ್ ಸ್ಟಾಕ್ ಕಂಪೆನಿ ಮೂಲಕ ಬದಗಿಸಲು ಸರ್ಕಾರದವರು ಆರ್ಡರ್ ಮಾಡಿದಾರೆ. ಸರ್ಕಾರದವರು ಭಂಡವಾಳದ ೧೦ ನೇ ೧ ಭಾಗ ಹಾಕುವರೆಂದೂ, ತಯಾರಾದ ಕಾಗದವು ಜೆನ್ನಾಗಿದ್ದಲ್ಲಿ ತಮ್ಮ ಉಪಯೋಗಕ್ಕೆ ಬೇಕಾದಷ್ಟನ್ನು ತೆಗೆದುಕೊಳ್ಳುವರೆಂದು ಹುಕುಂ ಮಾಡಿದಾರೆ.

ಮೈಸೂರು ದಸರಾ ವಸ್ತುಪ್ರದರ್ಶನದ ಸೆಕ್ರೆಟರಿಯವರ ಆಫೀಸು ಇಷ್ಟರವರೆಗೆ ಬೆಂಗಳೂರು ಗೌರ್ನ್‌ಮೆಂಟು ಸೋಪುಫ್ಯಾಕ್ಟರಿಯಲ್ಲಿದ್ದಿತು. ಈಗ ಅದು ಮೈಸೂರಿಗೆ ಬದಲಾಯಿಸಲಾಗಿದೆ ಇನ್ನು ಮುಂದೆ ಎಲ್ಲ ಪತ್ರವ್ಯವಹಾರಗಳನ್ನು "ಸೆಕ್ರೆಟರಿ, ಮೈಸೂರು ದಸರಾ ವಸ್ತುಪ್ರದರ್ಶನ ಸಮಿತಿ, ಸ್ಯಾಂಡಲ್ ಆಯಿಲ್ ಫ್ಯಾಕ್ಟರಿ ಮೈಸೂರು' ಎಂದು ಬರೆಯತಕ್ಕದ್ದೆಂದೂ ಪ್ರಕಟವಾಗಿದೆ.

ಮೈಸೂರು ಮುನಸಿಪಲ್ ಸರಹದ್ದಿನೊಳಗೆ ಬರುವ ಶಕ್ತಿವಾದ್ಯದ ಸಾಮಾನು ಮುಂತಾದ ೧೫೫ ಸಾಮಾನುಗಳಮೇಲೆ ಹೊಸದಾಗಿ ರೂಪಾಯಿಗೆ ೩ ಕಾಸಿನಂತೆ ಸುಂಕವು ಬರುವ ಜೂನ್ ತಿಂಗಳಿಂದ ವಿಧಿಸುವುದೆಂದು ಪ್ರಕಟವಾಗಿದೆ.

ಬೆಂಗಳೂರು ಮುನಸಿಪಲ್ ಕೌನ್ಸಿಲಿನಲ್ಲಿ ಕಳೆದ ವಿಾಟಿಂಗಿನಲ್ಲಿ ಮು|| ಸೀತಾರಾಮಯ್ಯನವರು ತಂದಿದ್ದ ಠರಾವುಗಳು ಮಂಜೂರಾದವು. ಸಭೆಯು ಪ್ರತಿವರ್ಷವೂ ಪ್ರೆಸಿಡೆಂಟರನ್ನು ಚುನಾಯಿಸಬೇಕೆಂದೂ, ಸಭೆಗೆ ಒಬ್ಬ ಉಪಾಧ್ಯಕ್ಷರನ್ನು ಚುನಾಯಿಸಬೇಕೆಂದೂ, ಅಭಿಪ್ರಾಯವೇ ಈ ಠರಾವುಗಳ ಸಾರಾಂಶ.

ಮೈಸೂರು ಸರ್ಕಾರದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಡೆಪ್ಯುಟಿ ಡೈರೆಕ್ಟರಾದ ಮ|| ರಾ|| ಎಸ್. ಜಿ. ಶಾಸ್ತ್ರಿಗಳು ತಮ್ಮ ಸಹೋದರರ ಪುತ್ರನ ಉಪನಯನ ಮಹೋತ್ಸವವನ್ನು ರಾಜಧಾನಿಯಲ್ಲಿ ತಾ|| ೮-೫-೩೬ ನೇ ಶುಕ್ರವಾರ ನೆರವೇರಿಸುವರೆಂದು ತಿಳಿಯಬಂದಿದೆ.

ಶ್ರೀ ಸೋಮವಂಶ ಆರ್ಯ ಕ್ಷತ್ರಿಯ ಸೇವಾಸಂಘ

ತೃತೀಯ ವಾರ್ಷಿಕೋತ್ಸವದ ಅಧ್ಯಕ್ಷರ ಭಾಷಣ

(ಬರೆದು ಬಂದುದು)

ಶ್ರೀ ಸೋಮವಂಶ ಆರ್ಯ ಕ್ಷತ್ರಿಯ ಸೇವಾ ಸಂಘದ ತೃತೀಯ ವಾರ್ಷಿಕೋತ್ಸವವು ಮೈಸೂರು ಇರ್ವಿ ರೋಡಿನಲ್ಲಿರುವ ಮ|| ರಾ|| ದುರ್ಗದ ವೆಂಕಟಪ್ಪನವರ ಶ್ರೀರಾಮಮಂದಿರದಲ್ಲಿ, ಮ|| ರಾ|| ಯಜಮಾನ್ ಕೇಶವಯ್ಯನವರ ನೇತೃತ್ವದಲ್ಲಿ, ಇವೇ ತಾರೀಖು ೨ ನೆಯ ಶನಿವಾರ ಸಾಯಂಕಾಲ ೬-೩೦ ಗಂಟೆಗೆ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ತಳಿರು ತೋರಣಗಳಿಂದ ದಿವ್ಯವಾಗಿ ಅಲಂಕರಿಸಲ್ಪಟ್ಟಿದ್ದ ಮಂದಿರವು ಸಭಿಕರಿಂದ ತುಂಬಿದ್ದಿತು. ಕಾರ್ಯಕಲಾಪಗಳು ವೇ|| ಸುಬ್ರಹ್ಮಣ್ಯಶಾಸ್ತ್ರಿಗಳ ದೇವತಾ ಪ್ರಾರ್ಥನೆಯೊಡನೆ ಪ್ರಾರಂಭವಾದವು. ಬಳಿಕ ಕರ್ನಾಸಂದಕರವಾದ ಸಂಗೀತವು ನಡೆಸಲ್ಪಟ್ಟಿತ್ತು. ಸಂಘದ ಗೌರವ ಸೆಕ್ರಿಟೆರಿಯವರು ವಾರ್ಷಿಕ ರಿಪೋರ್ಟನ್ನು ಓದಿ ಒಪ್ಪಿಸಿದರು. ವಿದ್ಯಾರ್ಥಿಗಳಿಗೂ, ವಿದ್ಯಾರ್ಥಿನಿಯರಿಗೂ ಅಧ್ಯಕ್ಷರು ಸ್ವಹಸ್ತ ಒಹುಮಾನಗಳನ್ನು ಹಂಚಿದ ಮೇಲೆ ದೀರ್ಘವೂ, ಗಂಭೀರವೂ ಆದ ಭಾಷಣವನ್ನು ಮಾಡಿದರು.

ಕುಲಬಾಂಧವರೇ ! ಸಭಾಸದರೇ !!

ನೀವು ಈ ದಿವಸ ನನ್ನನ್ನು ಅಧ್ಯಕ್ಷನನ್ನಾಗಿ ಮಾಡಿ ಗೌರವಿಸಿರುವುದು ನಿಮಗೆ ನನ್ನ ಮೇಲಿರುವ ವಿಶ್ವಾಸವನ್ನು ಸೂಚಿಸುತ್ತದೆ ಇದಕ್ಕಾಗಿ ನಾನು ನಿಮಗೆ ಸಂತೋಷದಿಂದ ವಂದಿಸುತ್ತೇನೆ.

ಕುಲಬಾಂಧವರೇ, ಈ ದಿವಸ ನಾವೆಲ್ಲರೂ ಸೇವಾಸಂಘದ ತೃತೀಯ ವಾರ್ಷಿಕೋತ್ಸವದಲ್ಲಿ ಭಾಗಿಗಳಾಗಿ, ನಮ್ಮ ಜನಾಂಗದ ಸಾಮಾಜಿಕ, ಆರ್ಥಿಕ, ವಿದ್ಯಾಸಂಪತ್ತುಗಳಲ್ಲಿ ಅಭಿವೃದ್ಧಿಯನ್ನು ಹೊಂದುವ ಮಾರ್ಗಗಳನ್ನು ಏರ್ಪಡಿಸುವುದು ನಮ್ಮೆಲ್ಲರ ಕರ್ತವ್ಯವಾಗಿರುತ್ತದೆ. ನಮ್ಮ ಜನಾಂಗದವರು ಪೂರ್ವಕಾಲದಲ್ಲಿ ಅತ್ಯಂತ ಅಭಿವೃದ್ಧಿಸ್ಥಿತಿಯಲ್ಲಿದ್ದರೆಂದು ಚರಿತ್ರೆಗಳ ಆಧಾರದಿಂದ ಹೇಳಬಹುದಾಗಿದೆ. ಇತ್ತೀಚೆಗೆ ನಮ್ಮ ಜನಾಂಗದವರು ಮೈಸೂರು ಸಂಸ್ಥಾನದ ನಾನಾ ಕಡೆಗಳಲ್ಲಿ ಚದುರಿ ಹೋಗಿರುತ್ತಾರೆ. ಕಲ್ಲಾ ಕುಶಲ ವಿದ್ಯೆಗಳೇ ನಮ್ಮವರ ಮುಖ್ಯ ಜೀವನ ಮಾರ್ಗಗಳಾಗಿರುತವೆ. ನಮ್ಮ ದೇಶದ ಕಲಾಕುಶಲ ವಿದ್ಯೆಗಳನ್ನು ಕೇಂದ್ರೀಕರಿಸಿದವರೆಂದರೆ ನಮ್ಮ ಜನಾಂಗದವರೇ. ಆದುದರಿಂದಲೇ ನಮ್ಮ ಜನಾಂಗದವರಿಗೆ ವಿಶ್ವಕರ್ಮಗಾರರೆಂಬ ಹೆಸರೂ ಉಂಟು ಕಲಾಪ್ರಪಂಚದಲ್ಲಿ ನಮ್ಮ ದೇಶದ ಕೀರ್ತಿಯನ್ನು ಹರಡಲು ನಮ್ಮವರೇ ಮುಖ್ಯ ಕಾರಣರಾಗಿರುತ್ತಾರೆ. ಆದರೆ ಈಗಿನ ಕಾಲದಲ್ಲಿ ಬೇರೆ ಎಲ್ಲಾ ಜನಾಂಗದವರೂ ವಿದ್ಯಾ ಪ್ರಚಾರವೇ ಮುಂತಾದವುಗಳಿಂದ ಅಭಿವೃದ್ಧಿ ಹೊಂದುತ್ತಿರುವಂತೆ ನಮ್ಮ ಜನಾಂಗದವರೂ ಅಭಿವೃದ್ಧಿ ಹೊಂದಲು ಅವಕಾಶವಿಲ್ಲವಾಗಿದೆ. ನಮ್ಮಲ್ಲಿ ವಿದ್ಯಾ ಪ್ರಚಾರವಿಲ್ಲದಿರುವುದೇ ಇದಕ್ಕೆ ಮುಖ್ಯ ಕಾರಣವಾಗಿರುತ್ತದೆ. ಪ್ರತಿಯೊಬ್ಬರೂ ವಿದ್ಯಾಭ್ಯಾಸದಲ್ಲಿ ಶ್ರದ್ಧೆಯನ್ನು ವಹಿಸಿ ತಮ್ಮ ಮಕ್ಕಳನ್ನು ವಿದ್ಯಾಶಾಲೆಗಳಿಗೆ ಕಳುಹಿಸಬೇಕು. ಸರ್ಕಾರಿ ನೌಕರಿಯಲ್ಲಂತೂ ನಮ್ಮ ಜನಾಂಗದವರು ಪ್ರಾತಿನಿಧ್ಯವೆಂಬುದನ್ನೇ ಅರಿಯರು. ನಮ್ಮ ಜನಾಂಗದವರು, ಹಿಂದುಳಿದ ಪಂಗಡಗಳಲ್ಲೆಲ್ಲಾ ಅತ್ಯಂತ ಹಿಂದುಳಿದ ಪಂಗಡವೆಂದು ಹೇಳಬೇಕಾಗಿದೆ. ||

ನಮ್ಮಲ್ಲಿ ವಿದ್ಯಾಪ್ರಚಾರವೇ ಮುಂತಾದ ಅಭಿವೃದ್ಧಿಗಳಾಗಬೇಕಾದರೆ ಘನಸರ್ಕಾರದವರ ಸಹಾಯವೂ ಅತ್ಯಾವಶ್ಯಕವಾಗಿರುತ್ತದೆ. ಎಲ್ಲಾ ಹಿಂದುಳಿದ ಪಂಗಡಗಳೂ ಘನಸರ್ಕಾರದವರಿಂದ ಅನೇಕ ಸಹಾಯ ಸೌಕರ್ಯಗಳನ್ನು ಹೊಂದುತ್ತಿದ್ದಾರೆ. ಆದರೆ ನಮ್ಮ ಜನಾಂಗದವರು ಮಾತ್ರ ಯಾವ ವಿಧವಾದ ಸಹಾಯವನ್ನೂ, ಉತ್ತೇಜನವನ್ನೂ ಹೊಂದದ್ದೇ ಇರುವುದು ಶೋಚನೀಯವಾದ ವಿಷಯವಾಗಿದೆ. ಇದುವರೆವಿಗೂ ಸರ್ಕಾರಿ ಇಲಾಖೆಗಳಿಗೆ ಉಮೇದುವಾರರ ಹುದ್ದೆಗಳು ಅನೇಕಾವರ್ತಿ ನಡೆದಿವೆ. ಆದರೆ ನಮ್ಮ ಜನಾಂಗದವರಿಗೆ ಒಂದುಪಾಯಿಯಾದರೂ ಆವ ಕೆಲಸವೇ ದೊರೆತಿಲ್ಲ. ಈರೀತಿ ಉತ್ತೇಜನವೇ ಇಲ್ಲದೆ ಇರುವುದರ ಪರಿಣಾಮಗಳು ಅತ್ಯಂತ ವಿಷಾದಕರವಾದುವು. ನಮ್ಮಲ್ಲಿ ವಿದ್ಯಾಭ್ಯಾಸ ಮಾಡಿದವರಿಗೆ ಸ್ವಲ್ಪವೂ ಉತ್ತೇಜನವೇ ಇಲ್ಲದಿರುವುದನ್ನು ನೋಡಿ ನಮ್ಮಲ್ಲಿ ಅನೇಕರು ವಿದ್ಯಾಭ್ಯಾಸವನ್ನೇ ಬಿಡುತ್ತಿದ್ದಾರೆ. ಇದರಿಂದ ನಿರಾಶೆಯೂ, ಅತೃಪ್ತಿಯೂ ಹೆಚ್ಚುತ್ತಿವೆ. ಕುಲಬಾಂಧವರೇ ! ನೀವು ಈ ರೀತಿ ಅಸಮಾಧಾನಕ್ಕೂ ಖೇದಕ್ಕೂ ಅವಕಾಶಕೊಡಬಾರದು. ಮುಂದೆಯಾಗುವ ಜನಾವಣೆಗಳಲ್ಲಿ ಘನಸರ್ಕಾರದ ಪಶು ನಮ್ಮ ಜನಾಂಗದವರಿಗೂ ಸಮತಾಭಾವನೆಯಿಂದ ಉತ್ತೇಜನವನ್ನು ಕೊಡುವರು. ಪ್ರಜೆಗಳು ಮಕ್ಕಳಿನೋಪಾದಿಯಲ್ಲಿ ಸಲಹಲ್ಪಡುತ್ತಿರುವ ರಾಮರಾಜ್ಯವೆನಿಸಿಕೊಂಡಿರುವ ನಮ್ಮ ದೇಶದಲ್ಲಿ ನಮಗೆ ಉತ್ತೇಜನವು ಸಿಕ್ಕೇಸಿಕ್ಕುತ್ತದೆ. ನೀವು ಉತ್ಸಾಹವನ್ನು ಬಿಡಬಾರದು. ನಿರಾಶರಾಗಬಾರದು. ವಿದ್ಯಾಪ್ರಚಾರಕ್ಕಾಗಿ ಎಲ್ಲಾ ಪ್ರಯತ್ನಗಳನ್ನೂ ಮಾಡಬೇಕು.

ಕುಲಬಾಂಧವರೇ ! ಸೇವಾಸಂಘದವರು ಪ್ರಾರಂಭಿಸಿರುವ ಶ್ರೀನಿಮಿಷಾಂಬಾದೇವಿ ಮಂದಿರದ ಪ್ರಯತ್ನವು ನನಗೆ ಅತ್ಯಂತ ಸಂತೋಷವನ್ನುಂಟುಮಾಡಿರುತ್ತದೆ. ಈ ಅಮೋಘ ಪ್ರಯತ್ನವು ಬೇಗನೆ ಸಫಲವಾಗಲೆಂದು ಹಾರೈಸುತ್ತೇನೆ. ಮುಖ್ಯವಾಗಿ ಅನ್ಯೋನ್ಯವಾಗಿ ವಿಶ್ವಾಸದಿಂದ ಪರಸ್ಪರ ಸಹಾಯಮಾಡುತ್ತಾ ನಮ್ಮ ಜನಾಂಗದವರು ಅಭಿವೃದ್ಧಿ ಹೊಂದಿ ಶ್ರೀದೇವಿಯ ಅನುಗ್ರಹದಿಂದ ಸರ್ವಸಂಪತ್ತುಗಳಿಂದಲೂ ಆಯುರಾರೋಗ್ಯಾದಿಗಳಿಂದಲೂ ವಿರಾಜಿಸಲೆಂದು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರ ಭಾಷಣವಾದನಂತರ ಸಭಿಕರಿಗೆ ಗಂಧಪುಷ್ಪ ಫಲತಾಂಬೂಲಾದಿಗಳು ಹಂಚಲ್ಪಟ್ಟವು. ಗೌರವ ಸೆಕ್ರಿಟೆರಿಯವರು ಅಧ್ಯಕ್ಷರಿಗೂ ಸಭಿಕರಿಗೂ ಸಂಘದ ಪರವಾಗಿ ವಂದನೆಗಳನ್ನು ಅರ್ಪಿಸಿದರು. ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯೊಡನೆ ಸಭೆಯು ಮುಕ್ತಾಯವಾಯಿತು.

ಕಲ್ಕತ್ತಾ ಕಾಳಿಕಾ ದೇವಾಲಯದಲ್ಲಿ ಆತ್ಮಹತ್ಯಪ್ರಯತ್ನ.

ಕಲ್ಕತ್ತಾ ದೇವಾಲಯದಲ್ಲಿ ಹಾಡು ಹೇಳಿಕೊಂಡು ಪೂಜೆ ಮಾಡುತ್ತಾ ಇದ್ದ ಭಕ್ತಾದಿಗಳ ಸಮುದಾಯದಲ್ಲಿ, ಒಬ್ಬ ಪ್ರಾಯದವನು ಒಂದು ಕತ್ತಿಯಿಂದ ತನ್ನ ಕುತ್ತಿಗೆಯನ್ನು ಕೊಯ್ದುಕೊಳ್ಳುವುದಕ್ಕೆ ಪ್ರಯತ್ನಮಾಡಿ ಕೊಯ್ದುಕೊಳ್ಳುತ್ತಿದ್ದನು. ಪಕ್ಕದಲ್ಲಿದ್ದವರು ನೋಡಿ ಆ ಮನುಷ್ಯನ ಕೈಯಿಂದ ಕತ್ತಿಯನ್ನು ಕಿತ್ತುಕೊಂಡು ನಂತರ ಪೋಲೀಸಿನವರಿಗೆ ವರ್ತಮಾನ ಕೊಟ್ಟರು. ಗಾಯಹೊಂದಿದ ಈ ಮನುಷ್ಯನು ಆಸ್ಪತ್ರೆಗೆ ಸಾಗಿಸಲ್ಪಟ್ಟನು ; ವಿಷಮಾವಸ್ಥೆಯಲ್ಲಿದ್ದಾನೆ.

ಕೋತಿ ಓಡಿಸುವದಕ್ಕೆ ೬೦೦೦ ರೂ.

ನೆಲ್ಲೂರಿನಲ್ಲಿ ಕೋತಿಗಳ ಕಾಟ ಹೆಚ್ಚಾಗಿರುವುದರಿಂದ, ಅವನ್ನು ದೇಶದಿಂದ ಒಡಿಸಲು, ಖರ್ಚಿಗೆ ಅಲ್ಲಿಯ ಮುನಿಸಿಪಾಲಿಟಿಯವರು ೬೦೦೦ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆ.

ಗಡ್ಡವುಳ್ಳ ಹೆಂಗಸರು.

ಉತ್ತರ ಜಪಾನಿನಲ್ಲಿ ಹುಡುಗಿಯರು ಗಡ್ಡವನ್ನು ಬೆಳೆಸುವರು. ಆ ದೇಶದಲ್ಲಿ ಗಡ್ಡವಿರುವ ಹೆಂಗಸೆಂದರೆ ಗಂಡಸುಹೆಂಗಸರಲ್ಲಿ ಬಹುಮಂದಿಗೂ ಇಷ್ಟ. ಗಡ್ಡವಿಲ್ಲದವರನ್ನು ಯಾರೂ ಗೌರವದಿಂದ ಕಾಣುವುದಿಲ್ಲ. ಆದುದರಿಂದ ಆ ದೇಶದ ಹೆಂಗಸರು ಗಡ್ಡವನ್ನು ಬೆಳೆಸಿಕೊಳ್ಳಲು ಬಹಳ ಅವಸ್ಥೆ ಪಡುತ್ತಾರೆ. ಮದ್ದುಗಳನ್ನು ಹಾಕಿಸಿಕೊಳ್ಳುತ್ತಾರೆ. ಔಷಧಗಳನ್ನು ಉಪಯೋಗಿಸುತ್ತಾರೆ. ದೇವರಿಗೆ ಹರಕೆ ಮಾಡಿಕೊಳ್ಳುತ್ತಾರೆ. ಇವೆಲ್ಲವೂ ನಿಷ್ಪ್ರಯೋಜನವಾದಲ್ಲಿ ಮಾಸೆಗಳನ್ನು « ಹಚ್ಚೆ » ಹಾಕಿಸಿಕೊಳ್ಳುತ್ತಾರೆ, ಆ ದೇಶದಲ್ಲಿ ಹಚ್ಚೆ ಹಾಕುವ ಸ್ತ್ರೀಯರ ಉದ್ಯೋಗವು ಬಹಳ ಲಾಭದಾಯಕವಾಗಿರುತ್ತದೆ.

೩೦ ವರ್ಷ ಕಾಲ ನಿದ್ದೆ.

ಇಂಗ್ಲೆಂಡಿನಲ್ಲಿ ೩೦ ವರ್ಷಗಳ ಕೆಳಗೆ ಕಟ್ಟಲ್ಪಟ್ಟ ಗೋಡೆಯೊಂದನ್ನು ಒಡೆಯಲು, ಅದರೊಳಗಿನಿಂದ ಒಂದು ಕಪ್ಪೆಯು ಹೊರಗೆ ಬಂದಿತು. ಈ ೩೦ ವರ್ಷಗಳೂ ಗೋಡೆಯಲ್ಲಿ ನಿದ್ದೆಮಾಡುತ್ತಿತ್ತೆಂದು ನಿರ್ಧಾರ ಮಾಡಿದರು.

ಬಳ್ಳಾರಿ ರೈಲ್ವೆ ಸ್ಪೇರ್ಸ್ ಷಂಟಿಂಗ್ ಯಾರ್ಡಿನಲ್ಲಿ ಒಬ್ಬ ಮಹಮದೀಯ ಹುಡುಗನು ತನ್ನ ಮೇಕೆಗಾಗಿ ಹುಡುಕುತ್ತಿರುವಲ್ಲಿ, ಅವನಿಗೆ ತಿಳಿಯದೆ ಒಂದು ಗುಡ್ಸ್ ಗಾಡಿಯು ಹಿಂದೆ ಬಂದಿತು. ಕಂಬಿಗಳನ್ನು ದಾಟಿ ಬರಲು ಅವಕಾಶವಿರಲಿಲ್ಲ. ಕೂಡಲೇ ರೈಲು ಕಂಬಿಗಳ ನಡುವೆ ಹುಡುಗನು ಮಲಗಿಬಿಟ್ಟನು. ಇಂಜನ್ನೂ ಒಂದು ಗಾಡಿಯೂ ಅವನ ಮೇಲೆ ಹಾದು ಹೋದವು. ಯಾವ ಅಪಾಯವೂ ಆಗಲಿಲ್ಲ.

Sadhana Aushadalaya
Dacca (Bengal)

ಸಾಧನ ಔಷಧಾಲಯ, ಢಕ್ಕ

ಅಧ್ಯಕ್ಷರು--ಭಾಗಲ್ಪುರದ ಮಾಜಿ ರಸಾಯನ ಶಾಸ್ತ್ರ ಪಂಡಿತರಾಗಿದ್ದ ಮ॥ ಜೋಗೀಶಚಂದ್ರ ಘೋಸು ಎಂ. ಎ. ಎಫ್. ಸಿ ಎಸ್. ಲಂಡ್ಕ್.

ಆಯುರ್ವೇದ ಶಾಸ್ತ್ರಕ್ಕೆ ಅನುಸಾರವಾಗಿ ಔಷಧಗಳು ತಯಾರಿಸಲ್ಪಡುತ್ತವೆ. ಕ್ಯಾಟಲಾಗು ಉಚಿತವಾಗಿ ಕಳುಹಿಸಲ್ಪಡುತ್ತೆ. ರೋಗ ವಿವರವನ್ನು ತಿಳಿಸಿದರೆ ಛಾರ್ಜಿಲ್ಲದೆ ಸಲಹೆ ಕೊಡಲ್ಪಡುತ್ತೆ.

ಮಕರಧ್ವಜ—ಸಕಲ ರೋಗಗಳನ್ನೂ ನಿವಾರಿಸುತ್ತದೆ. ಸುವರ್ಣ ಮಿಶ್ರವಾದದ್ದು. ವಾತ, ಪಿತ್ತ, ಕಫವನ್ನು ಸರಿಪಡಿಸಿ, ದೇಹಕ್ಕೆ ಶಕ್ತಿಯನ್ನೂ, ಆರೋಗ್ಯವನ್ನೂ ಉಂಟುಮಾಡುತ್ತದೆ. ಬೆಲೆ ತೊಲಕ್ಕೆ ೪ ರೂಪಾಯಿ.

ಸರೀಬಾದಿಸವ್ಸ—ಸ್ವನೇಹ. ಸವಾಯಿ ರೋಗಗಳಿಗೆ ಅಮೋಘ ಔಷಧವಾದ ರಸ ವಿಷವನ್ನು ಪರಿಹರಿಸುತ್ತದೆ. ಎಲ್ಲಾ ಮೂತ್ರ ರೋಗಗಳನ್ನೂ ನಿವಾರಿಸುತ್ತದೆ. ರಕ್ತವನ್ನು ಶುದ್ಧಿಪಡಿಸುತ್ತದೆ. ಬೆಲೆ ಸೇರು ೩ ರೂಪಾಯಿ.

ಶುಕ್ರಸಂಜೀವಿನಿ—ನಪುಂಸಕತ್ವ, ಧಾತು ಕ್ಷೀಣತೆ ಮುಂತಾದ ಧಾತ ವಿಕಾರ ರೋಗಗಳನ್ನೂ ಗುಣಪಡಿಸುವ ಶಕ್ತಿವರ್ಧಕ ಔಷಧ ಬೆಲೆ ಸೇರು ೧೬ ರೂಪಾಯಿ.

ಅಬಾಲಾಂಧವಯೋಗ—ನಡುನೋವು, ಮುಟ್ಟುದೋಷ, ಒಂಜೆತನ ಮೊದಲಾದ ಸ್ತ್ರೀಯರ ಎಲ್ಲಾ ಖಾಯಿಲೆಗೂ ದಿವ್ಯೌಷಧ. ಬೆಲೆ ೧೬ ಹೊತ್ತಿಗೆ ೨ ರೂಪಾಯಿ. ಮತ್ತು ೫೦ ಹೊತ್ತಿಗೆ ೫ ರೂ.

H. S- KAMAL SHERIFF, DENTSTe
Lansdowne Buildings, Mysore.

We prepare artificial teeth with which any hard substance can be chewed. WI Extract even the strongest teeth with the greatest aese. Stuffing the hollow tooth with gold and silver a speciality. Every work is done to entire satisfction.

Oriental Pharmacy
Geueral Hospital Road
MYSORE
fOr
Best Unani Medicines

ಗಮನಿಸಿರಿ ! ತಪ್ಪದೇ ಓದಿರಿ !!

ಈ ಪತ್ರಿಕೆಯಲ್ಲಿ ಪ್ರತಿವಾರವೂ ಪ್ರಕಟವಾಗುತ್ತಿರುವ ಜೀವಶಾಸ್ತ್ರದ ವಿಚಾರವಾದ ಲೇಖನಗಳೆಲ್ಲವೂ ಪುಸ್ತಕರೂಪದಲ್ಲಿ ಅಚ್ಚಾಗುತ್ತವೆ.

"ಜೀವಶಾಸ್ತ್ರ ತತ್ವಸಾರ"

ಅಥವಾ

ಸತ್ಯವದಿಲ್ಲಿ ?

ಲೇಖಕರು— ಕೆ॥ ಯವರು.

ಈ ಗ್ರಂಥದ ಮೊದಲನೆಯ ಮುದ್ರಣಕ್ಕೆ ಮಿತ ಮಿತವಾದ ಸಂಖ್ಯೆಯ ಪ್ರತಿಗಳನ್ನು ಮಾತ್ರ ಅಚ್ಚು ಹಾಕುವ ಏರ್ಪಾಡುಮಾಡಿದೆ. ಬೇಕಾದವರು ಮೊದಲೇ ತಮ್ಮ ಹೆಸರನ್ನು ಎಡಿಟರವರಲ್ಲಿ ರಿಜಿಸ್ಟರ್ ಮಾಡಿಸಬೇಕು. ಅಂಥವರಿಗೆ ಗ್ರಂಥವು ಅಚ್ಚಾಗುತ್ತಲೆ ವಿ. ಪಿ. ಮೂಲಕ ಕಳುಹಿಸಲಾಗುತ್ತದೆ. ಬೆಲೆ ರೂ. ೨

ಸೊಂದವರೇ ! ಮರುಗುತ್ತಿರುವವರೇ !!
ಇಲ್ಲಿ ಗಮನಿಸಿರಿ !!!

ಮರಣಹೊಂದಿದ ನಿಮ್ಮ ಪ್ರಿಯಬಂಧುಗಳು ಎಲ್ಲಿರುವರು ? ಅವರೊಡನೆ ಸಂಭಾಷಿಸಬಹುದೆ ? ಈ ಅಮೋಘವಾದ ವಿಚಾರವನ್ನು ಮೈಸೂರಿಂದ ಪುಸ್ತಕವನ್ನು ತರಿಸಿಕೊಂಡು ಓದಿ ತಿಳಿಯಿರಿ. ಈ ವಿಶೇಷವಾದ ದುಃಖಶಮನವನ್ನು ಹೊಂದಲೇ ಇರಬೇಡಿ. ಕೂಡಲೇ ಎಡಿಟರವರಲ್ಲಿ ನಿಮ್ಮ ಹೆಸರು ವಿಳಾಸಗಳನ್ನು ತಿಳಿಸಿ ರಿಜಿಸ್ಟರ್ ಮಾಡಿಸಿರಿ.

"ಸತ್ಯವಾದಿ ಆಫೀಸು"
ಚಾಮರಾಜಪುರಂ, ಮೈಸೂರು.

ಚಿಂತಿಸಬೇಡಿ

ನಿಮ್ಮ ಅದೃಷ್ಟವು ಏನೋ ಹೇಗೋ ಎಂದು ವ್ಯರ್ಥಾ ಚಿಂತಿಸಬೇಡಿ. ಮುಂದೆ ಬರುವುದನ್ನು ತಿಳಿದುಕೊಂಡು ಸುಖಮಾರ್ಗವನ್ನು ಕಲ್ಪಿಸಿಕೊಳ್ಳಿರಿ. ನಿಮ್ಮ ಜಾತಕದ ನಕಲನ್ನೋ, ಹುಟ್ಟಿದ ಕಾಲವನ್ನೋ ಇಲ್ಲವೆ ನೀವು ಕಾಗದ ಬರೆಯುವ ಕಾಲವನ್ನೂ ತಿಳಿಸಿರಿ, ನಿಮಗೆ ಬೇಕಾದ ಐದು ಪ್ರಶ್ನೆಗಳನ್ನು ಕೇಳಿರಿ. ತೃಪ್ತಿಕರವಾಗಿ ಉತ್ತರವನ್ನು ಕಳುಹಿಸುವೆವು. ಛಾರ್ಜು ಒಬ್ಬರಿಗೆ ೧—೪—೦ ರೂಪಾಯಿ ಮಾತ್ರ

ತಾಜಕ ಜ್ಯೋತಿಷ್ಕರು,
೧೦೬ ಲ ಚಾಮರಾಜ ಅಗ್ರಹಾರ, ಮೈಸೂರು

ನೀರಿನಿಂದ! ಹಣವನ್ನು ಶೇಖರಿಸಿ!

ನಿಮ್ಮ ಸೋಡಾ ಫೌಂಟನ್ನನ್ನು ಈಗಲೇ ಕೊಂಡುಕೊಳ್ಳಿ

H. SASSEN & CO.,
15, Armenian Street, Post Box 163
G. T. MADRAS

Wanted

Agents with Pay and Allowances to canvass subscribers and advertisers for

Satyavadi

Apply in person or through post to
The Manager,
Satyavadi Office, Satyavadi Buildings,
Chamarajpuram, Mysore.

shanmukhavilas Coffee Club

Jaganmohan Palace Road
M Y S O R E
— for —
EXCELLENT TIFFIN, & COFFEE

Shiromani NARAYANACHARYA
Chowkambha, Benarese.

S.U.N. & CO.
BENARES CITY

ಶಾಸ್ತ್ರಿಗಳೇ ! ಪೂರ್ವಿಕರು ಆರೋಗ್ಯರೇ ಅಥವ ಈಗಿನವರೇ? ರಾಮಣ್ಣಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ- ಅದಕ್ಕೆ ಕಾರಣವೇನು ? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆ ಮಾಡುತ್ತಿದ್ದರು. ಅದರಿಂದ ಏನುಫಲ ? ಅದನ್ನು ಧರಿಸಿದರೆ, ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ, ಸಂಪತ್ತು, ಕೀರ್ತಿ, ಇವುಗಳೆಲ್ಲಾ ಆಗುವುವು. ಹಾಗಾದರೆ, ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು ? ಅದು ಲೋಕಪ್ರಸಿದ್ಧಿಹೊಂದಿದ ನಮ್ಮ ಕಾಶೀ ಚೌಖಂಭಾ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ರುದ್ರಾಕ್ಷಿ ದೊರೆಯುವುದು.

ಸಣ್ಣ ಅಡ್ಡೆ ಪ್ರಮಾಣದ ೫ ಮುಖದ ಕಂಠಿಸರ 1 ಕ್ಕೆ ಆಣೆ 3 ರಿಂದ ರೂ 25 ರವರಿಗೆ ; 100 ರುದ್ರಾಕ್ಷಿಗಳುಳ್ಳಸರ 1 ಕ್ಕೆ ಆಣೆ 3 ರಿಂದ ರೂ. 25 ರವರೆಗೆ ; ಗೌರೀಶಂಕರ ರುದ್ರಾಕ್ಷಿ 1 ಕ್ಕೆ ರೂ 3 ರಿಂದ 50 ರವರಿಗೆ ; ಮತ್ತು 3--4--6--7--8 ಮುಖಗಳ ಕಾಳು ಆಣೆ 4 ರಿಂದ ರೂ 10 ರವರಿಗೆ ; 9--10--11 ಮುಖಗಳುಳ್ಳ ಕಾಳು 1 ಕ್ಕೆ ರೂ 2 ರಿಂದ 30 ರವರಿಗೆ ; 12--13--14 ಮುಖದ ಕಾಳು 1 ಕ್ಕೆ ರೂ 5 ರಿಂದ 100 ರವರಿಗೆ. ಸಣ್ಣ ರುದ್ರಾಕ್ಷೀ ಅವರೇ ಕಾಳಿಗಿಂತ ಸಣ್ಣದಾಗುತ್ತಾ ಕ್ರಯ ಜಾಸ್ತಿ ; ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡದಾಗುತ್ತಾ ಕ್ರಯ ಜಾಸ್ತಿ ಆಗುವುದು. [ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟಾಂಪು ಕಳುಹಿಸಿದಲೆ 3 ಇನಾಮುಗಳು : 1 ವಿಶ್ವೇಶ್ವರ ಪಠ, 1 ಕಾಶೀನಕ್ಷೆ, 1 ಕ್ಯಾಟಲಾಗಿನೊಡನೆ 3 ಇನಾಮುಗಳು-

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬೆನಾರಿಸ್ [ಕಾಶಿ]